# ನಂಬಿಕೆಯ ನೂಲು

ಬಸು ಬೇವಿನಗಿಡದ
ಕಲೆ: ಎಚ್‌.ಎಸ್‌. ಮೋನಪ್ಪ



## ಗಟ್ಟಿಗಿತ್ತಿ ಮಾಯಕ್ಕನ ವಿನಮ್ರ ನುಡಿ

ಇನ್ನೇನು ಚುಮುಚುಮು ಎಂದು ಬೆಳಗು ಹರಡಿತೆನ್ನುವಾಗ ಓಣಿಯಲ್ಲಿ ನಿಂತು ಹಲ್ಲು ತಿಕ್ಕುವವರು, ಮನೆ ಮುಂದೆಯೆ ದೊಡ್ಡದಾಗಿ ಕ್ಯಾಕರಿಸಿ ಉಗುಳುವವರು, ಬಾಯಿ ಸ್ವಚ್ಛ ಮಾಡಿಕೊಂಡು ತಾಮ್ರದ ಚರಿಗೆಯಲ್ಲಿ ರಾತ್ರಿಯೆ ತುಂಬಿಟ್ಟಿರುವ ನೀರನ್ನು ಗಳಗಳನೆ ಕುಡಿಯುವವರು, ಪ್ಲಾಸ್ಟಿಕ್ ಚರಿಗೆ ಹಿಡಿದುಕೊಂಡು ಬಯಲಕಡೆ ಹೊರಡುವವರು ಹೀಗೆ ಓಣಿಓಣಿಯ ಅಂಗಳದಲ್ಲಿ ನಿಂತವರು, ಕಟ್ಟೆಯ ಮೇಲೆ ಕುಂತವರು, ಆಗಷ್ಟೆ ಎದ್ದು ಕೌದಿ ಕಂಬಳಿ ಮಡಚುವವರು ಮಲ್ಲೂರಿನ ಮುಂಜಾನೆಗಳನ್ನು ಸಾಕಷ್ಟು ಮನಮೋಹಕಗೊಳಿಸುತ್ತಿದ್ದರು. ನಡುನಡುವೆ ನಾಗಪ್ಪನ ಕೆಲಸಕ್ಕೆ ಅವನನ್ನು ಹೊಗಳಿದಂತೆಯೂ, ಬೆಳಗಿನ ಸಕ್ಕರೆನಿದ್ದೆಯಲ್ಲಿದ್ದ ತಮ್ಮನ್ನು ಇಷ್ಟು ಬೇಗನೆ ಎಬ್ಬಿಸಿದ್ದಕ್ಕೆ ಬೈಯ್ದಂತೆಯೂ ಮಾಡುತ್ತಿದ್ದರು. ಆ ಮಾತುಗಳು ಒಂದು ರೀತಿಯಲ್ಲಿ ಅವನಿಗೆ ಚುರುಕು ಮುಟ್ಟಿಸುವಂತೆಯೂ ಮತ್ತೊಂದು ರೀತಿಯಲ್ಲಿ ತಮ್ಮತಮ್ಮಲ್ಲಿ ಹೇಳಿಕೊಂಡಂತೆಯೂ ಇರುತ್ತಿದ್ದವು.

‘ಓಹ್, ಆಗ್ಲೆ ನಾಗಪ್ಪ ನೀರು ಜಗ್ಗಾಕ ಸುರು ಮಾಡ್ಯಾನ ಕಾಣ್ತದ. ಇಂವೇನು ನಿದ್ದಿ ಗಿದ್ದಿ ಮಾಡ್ತಾನೋ, ಇಲ್ಲೋ? ಯಾರಿಗ್ಗೊತ್ತು? ಕಣ್ಣಿನ ರೆಪ್ಪಿಗೆ ರೆಪ್ಪಿ ಕೂಡಿಸೋ ಮಾರಾಯ. ಹಂಗೇ ಮುಂದೇನು ಮಾಡ್ಲಿ, ಮುಂದೇನು ಮಾಡ್ಲಿ ಅಂತ ತಡಬಡಸ್ತಿರತಿ? ನಿನ್ನ ಕೈಯಂತೂ ಯಾವಾಗ್ಲೂ ಮುಂದಿನ ಕೆಲಸಕ್ಕ ಬಳಾಬಳಾ ಅಂತಿರತಾವು. ಬಿರುಬಿಸಿಲಾದ್ರೂ ಇರ್ಲಿ, ಇಲ್ಲಾ ಸಟ್ಟಾನ ಸರಹೊತ್ತೆ ಇರಲಿ, ಯಾವಾಗ ನೋಡಿದ್ರೂ ಯಾವುದಾದ್ರೂ ಕೆಲಸಬಗಸಿಯೊಳಗ ಇದ್ದ ಇರ್ತಾನ. ಇನ್ನು ಮಾಯಕ್ಕನ ಆಜ್ಞಾ ಅಂದ್ರ ಮುಗಿದಹೋತು. ಆಕಿ ಮಾತಂದ್ರ ಇಂವಗ ದೇವರ ವಾಕ್ಯ ಇದ್ದಂಗ. ಆಕೀ ಏನೇ ಹೇಳಿದ್ರೂ ಎಲ್ಲಾ ಸೈಯ ಸೈ...’

ಸುಮಾರು ನಲವತ್ತು ಐವತ್ತು ಫೂಟು ಉದ್ದದ ಹಗ್ಗ ಇಳಿಬಿಟ್ಟು ಗಡಗಡೆ ಮೇಲಿಂದ ಸರಸರನೆ ಆ ನೀರು ಎಳೆಯುವುದು ನಾಗಪ್ಪನಿಗೆ ಅದೆಷ್ಟು ರೂಢಿ ಎಂದರೆ ಅವನು ಈ ಬಾವಿಯ ನೀರು ಜಗ್ಗುವುದಕ್ಕಾಗಿಯೇ ಹುಟ್ಟಿದ್ದಾನೆಂದು ಹೇಳಬಹುದಿತ್ತು. ಅವರಿವರೊಂದಿಗೆ ಅದು ಇದು ಮಾತಾಡುತ್ತ ಕಣ್ಣು ಮುಚ್ಚಿ ಕಣ್ಣು ತೆಗೆಯುವಷ್ಟರಲ್ಲಿ